ತನುಮನಗಳನ್ನು ಸಮರ್ಪಿಸಿ ನಿಲ್ಲುವುದಾದರೆ, ಆ ದೈವವು ಸಕಲರನ್ನೂ ಸಂರಕ್ಷಿಸದೆ ಬಿಡುವುದುಂಟೆ ಎನ್ನಬೇಕು' ಎಂದರು. ಅಜಿತಸೇನರ ಈ ಮಾತಿನಿಂದ ಪ್ರಭುಗಳಿಗೆ ಅತುಳಾನಂದವಾಗಿ, 'ನಗರದ ಹೊರವಲಯದ ಬಿರುಬಿಸಿಲಲ್ಲಿ ನಿಂತು ಬಾಯಿಬಡಿಯುತ್ತಿರುವ ಆ ಗಾಂವಟಿಗರ ತಲೆಯ ಮೇಲೆ ಅಮಾತ್ಯರ ತಣ್ಣನೆಯ ಮಾತಿನ ನೀರ ಹನಿಗಳನ್ನು ಸಿಂಪಡಿಸುವುದೇ ಮಾರ್ಗ' ಎಂದು ಬಗೆದರು. ಆದರೆ, ಗಾಂವಟಿಗ ಸಮೂಹವು ರಾಜ ಹೆಗಡೆಗಳ ಮುಖೇಣ ಕಳಿಸಿದ ಪ್ರಭುವಾಕ್ಯವನ್ನು ಕಿವಿದೆರೆಗೆ ಹಾಕಿಕೊಂಡಂತೆ ಕಾಣಲಿಲ್ಲ.

★★★

ವಿದಿಶಾ ನಗರದ ಹೊರವಲಯದಲ್ಲಿ ಅದಾಗತಾನೇ ನಿರ್ಮಾಣವಾದ ವಿಶಾಲ ಭವ್ಯದೇಗುಲದ ಗೋಪುರ ಕಲಶ ಸ್ಥಾಪನೆ, ತಳಗಡೆಯ ದ್ವಾರಬಂಧದ ತೆರವು, ಗರ್ಭಾಂಕಣದ ಮೂಲವಿಗ್ರಹದ ನೇತ್ರದೃಷ್ಟಿಯ ನೋಟದಾರಂಭಕ್ಷಣ ಇದೆಲ್ಲದರ ಪೂಜಾ ವಿಧಿವಿಧಾನಗಳು ಒಂದರ ಮೇಲೊಂದರಂತೆ ಜರುಗುತ್ತ, ಅದು ಒಂಬತ್ತು ದಿನಕಾಲ ಸಾಂಗೋಪಾಂಗ ನೆರವೇರುತ್ತಲಿತ್ತು. ನಗರದ ದಶದಿಕ್ಕುಗಳ ರಾಜಮಹಾರಾಜರು, ಪಾಳೆಯಗಾರರು, ಮಾಂಡಲಿಕರಲ್ಲದೆ ಅವರವರ ಅಂತಃಪುರದ ರಾಣಿಯರು, ಗಣಿಕೆಯರು, ನವರತ್ನಾಭರಣಗಳಿಂದ ಅಲಂಕೃತರಾಗಿ ಝುಣಝುಣತ್ಕಾರ ದನಿಯ ಗೆಜ್ಜೆಯ ನಿಧಾನಗತಿ ಹೆಜ್ಜೆಯಲ್ಲಿ ಬಂದರು. ಅವರ ಮೈಗಾವಲಿಗೆಂಬಂತೆ ರಾಜಭಟ, ಗರುಡರ ನೆರವಿಯು ಆಗಮಿಸಿ ತಂತಮ್ಮ ನಿಯೋಜಿತ ಬಿಡಾರಗಳಲ್ಲಿ ಸಂಸ್ಥಾಪನೆಗೊಂಡಿರುವರು. ದೇಶದ ಘನ ಅಗ್ರಹಾರಗಳಿಂದ ಆಗಮಿಸಿದ ಆಗಮಿಕ ಪಂಡಿತರು, ಶ್ರೋತ್ರಿಯರು, ವೇದಪಾರಗರು ಅವರ ಸಹಾಯಕ ಶಿಷ್ಯಕೋಟಿಯಾದರೋ ಸೂರ್ಯಕಿರಣ ಸೂಚನೆಯ ಮುನ್ನವೇ ಎಚ್ಚರಗೊಂಡು ತಂತಮ್ಮ ಪ್ರಾತರ್ವಿಧಿ, ಸ್ನಾನ ಸಂಧ್ಯಾವಂದನೆಗಳನ್ನು ಸಂಪನ್ನಗೊಳಿಸಿಕೊಂಡು ಗುಡಿಯ ಗರ್ಭಾಂಕಣದ ರಂಗಮಂಟಪದ ಸುತ್ತ ಪದ್ಮಾಸನ ಹಾಕಿ ಸೂರ್ಯ ಸುಪ್ರಭಾತ ಮೊದಲಾಗಿ, ಸಾಯಂಸಂಜೆಯವರೆಗೂ ವೇದಘೋಷಗಳಲ್ಲಿರುವರು. ಆಳುವ ಮಹಾಪ್ರಭುಗಳು ಒಮ್ಮೆ ತಮ್ಮಕಡೆ ಕಟಾಕ್ಷ ಬೀರಿದರೂ ಸಾಕು ಕವಿ ಗಮಕಿ, ವಾದಿ ವಾಗ್ಮಿಗಳು ಅಲ್ಲೇ ಕಾವ್ಯರಚನೆಗೈದು, ಓದಿ ವಿಸ್ತರಿಸಿ, ವ್ಯಾಖ್ಯಾನಿಸುವ, ಪ್ರಭು ಚಿತ್ತದ ಪಾತೋಷಕವನ್ನು ತಮ್ಮದಾಗಿಸಿಕೊಳ್ಳುವ ಆತುರದಲ್ಲಿರುವರು.

ಇತ್ತ ಹೋಮಕುಂಡದ ಜ್ವಾಲೆಯು ಸಮಿತ್ತುಗಳಿಂದಲೂ, ಸುರಿಯುತ್ತಿರುವ ಆಜ್ಯದಿಂದಲೂ ಭಗಭಗನೆದ್ದು ಅದು ದೇವಲೋಕ ಮುಟ್ಟುವಂತಿದೆ. ಗರ್ಭಾಂಕಣದ ಸ್ಥಾನಿಕ ದೇವತೆಯಿಂದ ಹಿಡಿದು ಪ್ರಕಾರದಂಗಣದ ದೇವಾನುದೇವತೆಗಳಿಗೆಲ್ಲ ಕ್ಷೀರ, ದಧಿ, ತೈಲ, ಘೃತ, ನಾರಿಕೇಳದ ಸಂಪ್ರೋಕ್ಷಣೆಯಲ್ಲಿ ತೊಡಗಿ ಆ ಮುಂದಿನ ಯಜ್ಞಾಹುತಿ, ಮಹಾಮಂಗಳಾರತಿಯ ಸುಮುಹೂರ್ತ ಪವಿತ್ರ ಸಮಯ ಸನಿಹವಾಗುವ ಮೊದಲೇ ಆಗಮಿಕ ಪಂಡಿತರಿಂದ ಒಂದು ಘೋಷಣೆ ಕೇಳಿ ಬಂತು. ಅದೆಂದರೆ, ಇನ್ನು ದೇವಾಲಯದ ಒಳಪ್ರಾಂಗಣದಲ್ಲಿ ನೆರೆದಿರುವ ಕೂಲಿಕಾರ್ಮಿಕರು ದಯಮಾಡಿ ಹೊರಗಾಗಬೇಕು. ದೇವಾಲಯದ ಈ ಪ್ರಾಂಗಣ ಪವಿತ್ರಗೊಂಡು ಮುಂದಿನ ಅಮೃತಘಳಿಗೆಯಲ್ಲಿ ದೈವ ತನ್ನ ನೇತ್ರವನ್ನು ಲೋಕದೆಡೆಗೆ ಪ್ರಸರಿಸಿ, ಆಶೀರ್ವದಿಸಲಿದೆ. ಇತರಾದಿಗಳು ತಪ್ಪು ತಿಳಿಯಬಾರದೆಂದು ಕೋರಲಾಗಿದೆ. ದೇವಾನುದೇವತೆಗಳು ದುಡಿಮೆಗಾರರ ವರ್ಷಗಟ್ಟಲೆಯ ಕಾಯಕವನ್ನು ಮೆಚ್ಚಿ ಆಶೀರ್ವದಿಸಿರುತ್ತಾರೆ. ಕಾರ್ಮಿಕರು ದೇವಾಲಯದ ಹೊರಬಾಗಿಲಲ್ಲಿ ನಿಂತು ಆ ವಿಶಾಲ ಗೋಪುರದ ಹಿರಿದಾದ ದ್ವಾರದಿಂದಲೇ ಗರ್ಭಾಂಕಣದಲ್ಲಿ ನಡೆಯುವ ಕೈಂಕರ್ಯವನ್ನು ವೀಕ್ಷಿಸಿ ನೇತ್ರಾನಂದ ಹೊಂದಲು ಅವಕಾಶವಿದೆ ಎಂದರು. ಅತ್ತಗುಡಿಯ ಹೊರಬಯಲಲ್ಲಿ ಭಿಕ್ಷಾರ್ಥಿಗಳಾಗಿ ಬಂದು ಸೇರಿದ ದೇಶದೇಶದ ಕುಂಟರು, ಕುರುಡರು ಇತರಾದಿ ವಿಕಲಾಂಗರು, ನಿರ್ಗತಿಕರನ್ನು ರಾಜಭಟರು ಕೈಗೋಲಿನಿಂದ ಅಪ್ಪಳಿಸಿ ಅತ್ತತ್ತ ತಳ್ಳುತ್ತಿದ್ದಾರೆ. ಅಲ್ಲದೆ ನಗರದತ್ತಣಿಂದ